ದಿವಾಳಿಯಾದ ಡಿಕ್ರೀ ದೇಣೇದಾರ ಮೈಸೂರು ತಾಲ್ಲೂಕು ಸೊಳ್ಳೇಪುರದಲ್ಲಿರುವ ಸ್ಕೂಲ್ ಮಾಸ್ಟರ್ ಬ್ರಹ್ಮದೇವಯ್ಯನ
ವಿಷಯದಲ್ಲಿ—

ಸ್ನ 1890ನೇ ಇಸವಿ ದಿವಾಳಿ ಕೇಸ್ ನಂಬರ್ 445.

ಹುಕ್ಕುಂ

ಮೇಲ್ಕಂಡ ಬ್ರಹ್ಮದೇವಯ್ಯನು ನಿರ್ಬಂಧದಿಂದ ಖುಲಾಸೆಯಾಗಬೇಕೆಂದು ಕೊಟ್ಟ ಅರ್ಜಿ ಅಂಶವು ಈ ಕೋರ್ಟು ರೂಬರೂ ಅರ್ಜೀದಾರನಾದ ಬ್ರಹ್ಮದೇವಯ್ಯನ ಪರವಾಗಿ ಫಸ್ಟ್ ಗ್ರೇಡ್ ಪ್ಲೀಡರ್ ಸುಬ್ಬರಾಯರನ್ನು ಮತ್ತು ಸದರೀಯವನ ಲೇಣೆದಾರ್‌ರಾದ 1ನೇ ಕೆಂಪದೇವಮ್ಮನ ತರಫ ಅಡ್ವೊಕೇಟ್ ವೆ|| ಸುಬ್ಬರಾಯರ್ ಇವರಿಗೂ ದರ್ಖಾಸ್ತ್ ಮಾಡಲ್ಪಟ್ಟಿತು.

ಈ ಕೆಳಗೆ ನಮೂದು ಮಾಡಲ್ಪಡುವ ಲೇಣೇದಾರ್‌ರು ತಮಗೆ ಈ ದರ್ಖಾಸ್ತ್ ನೋಟಿಸ್ ಜಾರಿಯಾಗಿದ್ದಾಗ್ಯೂ ಖುದ್ದಾಗಿಯಾಗಲಿ ಅಥವಾ ಲಾಯರ್ ಮೂಲಕವಾಗಿಯಾಗಲಿ ಹಾಜರಾಗುವದಕ್ಕೆ ತಪ್ಪಿ ಹೋದರು ಯಾರಂದರೆ—2ನೇ ಮೈಸೂರು ಸರ್ವಜನವರ್ಧನಿ ಬ್ಯಾಂಕ್ ಲಿಮಿಟೆಡ್ 3ನೇ ದೇವೀರಮ್ಮ.

ಸಿವಿಲ್ ಪ್ರೊಸಿಜ್ಯೂರ್ ಕೋಡಿನ 20ನೇ ಅಧ್ಯಾಯದ ನಿರೂಪಣೆಗಳ ಫಲವನ್ನು ಸದರೀ ಸ್ಕೂಲ್ ಮಾಸ್ಟರ್ ಬ್ರಹ್ಮದೇವಯ್ಯನು ಹೊಂದುವದಕ್ಕೆ ಹಕ್ಕುದಾರನಾಗುವದರ ಮೂಲಕ ದಿವಾಳಿಯಾದವನೆಂದು ತೀರ್ಮಾನಿಸಲ್ಪಟ್ಟಿರುತ್ತೆಯಾಗಿ ಸದರೀ ದಿವಾಳಿಯಾದವನ್ನ ನಿರ್ಬಂಧದಿಂದ ವಿಮೋಚನೆ ಮಾಡಿರುವದಲ್ಲದೆ ಇದಕ್ಕೆ ಲಗತ್ತಾಗಿರುವ ಪಟ್ಟಿಯಲ್ಲಿ ಕಂಡ ಯಾವ ಸಾಲಕ್ಕೂ ಇನ್ಸ್ತರವಾಗಿಯಾಗಲಿ ದಸ್ತಗಿರಿ ಮಾಡಲ್ಪಟ್ಟು ನಿರ್ಬಂಧಪಡುವ ಜವಾಬ್ದಾರಿಯಿಂದ ಸಹ ಅವನ್ನ ನಿಖಾಲಸ್ ಮಾಡಲಾಗಿರುತ್ತೆ ಯೆಂದು ಇದರಿಂದ ಹುಕ್ಕುಂ ಮಾಡಲ್ಪಟ್ಟಿರುತ್ತೆ.

ಸ್ನ 1890ನೇ ಇಸವಿ ಮಾರ್ಚಿ 5ನೇ ತಾರೀಖಿನಲ್ಲಿ ಈ ಕೋರ್ಟು ಮೊಹರ್ ನಮ್ಮ ದಸ್ತಖತ್‌ನೀಲೀ ಕೊಡಲ್ಪಟ್ಟಿತು.

ಸಾಲದಪಟ್ಟಿ.

ನಂಬರ್.	ಲೇಣೇದಾರ್‌ರ ಅಥವಾ ದಾವಾದಾರ್‌ರ ಹೆಸರು ಮತ್ತು ವಿವರ ಮತ್ತು ಹಾಲೀ ತಿಳಿಯಬಂದ ಅವರುಗಳ ವಾಸಸ್ಥಳ.	ಸಾಲದಮೊಗ	ಯಾವಾಗ ದೇಣೇ ಬಂದದ್ದು.	ದೇಣೆಯ ಸ್ವಭಾವ ಮತ್ತು ಅದರ ಪ್ರತಿಫಲ ಮತ್ತು ಗಿರ್ವೀಯೇನಾದರೂ ಇದ್ದರೆ.	ಷರಾ.
1	ಮೈಸೂರು ಕಿಲ್ಲೆದಲ್ಲಿರುವ ಸುಬ್ಬಾಯಿಪಂಡಿತರ ಮನೇಲಿರುವ ಕೆಂಪದೇವಮ್ಮ.	113 1 10	..	ಡಿಕ್ರೀ ಬಾಬತ್ತು.	

ಸಿ. ಶ್ರೀನಿವಾಸಯ್ಯಂಗಾರ್,
ಸಬ್ ಜಡ್ಜ್.

ಇದರಿಂದ ಸಮಸ್ತ ಜನರಿಗೂ ತಿಳಿಯಪಡಿಸುವದೇನಂದರೆ,

1. ಮೈಸೂರು ಡಿಸ್ಟ್ರಿಕ್ಟ್ ಮಳವಳ್ಳಿ ತಾಲ್ಲೂಕು ಗ್ರಾಮಾಂತರಗಳ ಸರ್ಕಾರಿ ಬಂಜರು ಜಮೀನುಗಳಲ್ಲಿ ಯಿರುವ ಕುರಂಗದ ಕಲ್ಲನ್ನು ಜಮಾಯಿಸಿಕೊಳ್ಳುವ ಬಗ್ಗೆ ಗುತ್ತಿಗೆಯನ್ನು 1890ನೇ ಇಸವಿ ಏಪ್ರೆಲ್ ಮಾಹೆ 17ನೇ ಮಕ್ಕುಂಮಿನಲ್ಲಿ ಮಳವಳ್ಳಿ ತಾಲ್ಲೂಕು ಕಛೇರಿಯಲ್ಲಿ ಅಮಲ್ದಾರ್‌ರ ರೂಬರೂ ಪೋಟಾಪೋಟಿಯಿಂದ ಹರಾಜುಮಾಡಿಸುತ್ತಾಗಿ ಯಿನ್ನೆನ್ನಳ್ಳ ಜನರು ಹಾಜರಾಗಿ ಚಡದರಖಾಸ್ತು ಮೂಲಕ ಪಡೆಯಬಹುದು.

2. ಈ ಕಂಟ್ರಾಕ್ಟು ವಾಯಿದೆಯು 1891ನೇ ಇಸವಿ ಮಾರ್ಚಿ ಮಾಹೆ ಆಖೈರಿಗೆ ಪೂರ್ತಿಯಾಗಿರುವದು.

3. ಚಡಸವಾಲ್‌ದಾರನು ತನ್ನ ಬೀಟು ಬೊಬಲಗು ಪೈಕಿ ನಾಲ್ಕರಲ್ಲಿ ಒಂದು ಭಾಗ ಬೊಬಲಗನ್ನ ತೇವಣಿಯಾಗಿ ತಕ್ಷಣವೆ ಹಾಜರ್ಮಾಡಬೇಕು. ಉಳಿದ ಬೊಬಲಗನ್ನು ಹರಾಜು ಡೇಟು ಲಾಗಾಯಿತ್ತು ಹದಿನೈದು ದಿವಸದ ವಳಗಾಗಿ ಪಾವತಿ ಮಾಡಬೇಕು. ಇದಕ್ಕೆ ತಪ್ಪಿದರೆ ಹಾಜರ್ಮಾಡಿದ ತೇವಣಿ ಬೊಬಲಗು ಸರ್ಕಾರಕ್ಕೆ ದಂಡವಾಗಿ ಕೇರಿಸಿಕೊಳ್ಳಲ್ಪಡುವದು, ಡಿಪಾಜಿಟ್ಟು ಹಾಜರ್ಮಾಡದೆ ಯಿದ್ದಗ್ಯು ಅಥವಾ ಬಾಕಿ ಬೊಬಲಗು ಪಾವತಿ ಮಾಡಲು ತಪ್ಪಿದಾಗ್ಯು ಈ ಬಾಬು ಪುನಹ ಹರಾಜು ಮಾಡಲ್ಪಟ್ಟು ಆದರಿಂದ ಉಂಟಾಗುವ ನಷ್ಟಕ್ಕೆ ಮೊದಲು ಚಡಸವಾಲ್‌ದಾರನು ಗುರಿಯಾಗಿರುವನು, ಚಡಸವಾಲ್ ಬೊಬಲಗಿನ ಮೇಲೆ ರೂಪಾಯಿ 1ಕ್ಕೆ ವಂದು ಅಣೆಮೇರಿಗೆ ಲೋಕಲ್‌ಸೆಸ್ಸು ಸಹ ಚಡಸವಾಲುದಾರನು ಕೊಡಬೇಕು.

4. ಈ ಹರಾಜು ದಿವಾನ್‌ಸಾಹೆಬರವರ ಮಂಜೂರಾತಿಗೆ ವಳಪಟ್ಟಿರುತ್ತೆ. ಮಂಜೂರು ಹುಕುಂ ಬಂದ ಕೂಡ್ಲೆ ಬಾಬು ಸುಫು ರ್ದು ಮಾಡಲ್ಪಡುತ್ತೆ.

5. ಯಿಜಾರೆದಾರನು ಸರ್ಕಾರದ ಬಂಜರು ಜಮೀನುಗಳಲ್ಲಿರುವ ಹುಲ್ಲನ್ನು, ಹುಲ್ಲು ಯಿಜಾರೆ ಮಾಡಿಕೊಂಡವರು ಮೇಯಿಸಿ ಕೊಳ್ಳುವದಕ್ಕೆ ಅಭ್ಯಂತರ ಪಡಿಸಕೂಡದು.

6. ಸರ್ಕಾರದ ಬಂಜರು ಜಮೀನುಗಳನ್ನು ನಗದಿಯಾತಿಗೆ ದರಖಾಸ್ತು ಬಂದದ್ದರ ಮೇಲೆ ಸರ್ಕಾರದವರು ಸಾಗುವಳಿಗೆ ಕೊಡ ತಕ್ಕ ವಿಷಯದಲ್ಲಿ ಯಿಜಾರೆದಾರನು ಅಡ್ಡಿ ಮಾಡಕೂಡದು.

7. ಈ ಕಲ್ಲುಗಳನ್ನು ಜಮಾಯಿಸುವದಕ್ಕೋಸ್ಕರ ಜಮೀನುಗಳಲ್ಲಿ ಗುಂಡಿಗಳ ಮಾಡಿ ಅರೂಪಪಡಿಸಕೂಡದು, ಹಾಗೆ ಮಾಡಿ ದ್ದಾದರೆ ಅಂಥಾ ಗುಂಡಿಗಳನ್ನು ತಕ್ಷಣವೆ ಇಜಾರೆದಾರನು ಹಾತ'ಲಾಗವಡಿನಿಂದ ಮುಚ್ಚಿ ಪೂರ್ವದ ಸ್ಥಿತಿಗೆ ತರುವದಕ್ಕೆ ಬದ್ಧನಾ ಗಿರಬೇಕು.

8. ಇಜಾರೆದಾರನು ಹಿಡುವಳಿ ಜಮೀನಿನಲ್ಲಿ ಇರತಕ್ಕ ಕುರಂಗದ ಕಲ್ಲುಗಳನ್ನು ಆಯಾಯು ಹಿಡುವಳಿದಾರ್ರ ಅನುಮತಿ ವಿನ ಹ ಆರಿಸಿಕೊಳ್ಳಕೂಡದು. ತಮ್ಮ ಹಿಡುವಳಿ ಜಮೀನುನಲ್ಲಿ ಇರತಕ್ಕ ಕಲ್ಲುಗಳನ್ನು ಜಮಾಯಿಸಿಕೊಳ್ಳುವದಕ್ಕಾಗಲಿ ಅಥವಾ ಯಿಜಾ ರೆದಾರನ ವಿನಹ ಇತರರಿಗೆ ವಿಕ್ರಯಿಸುವದಕ್ಕಾಗಲಿ ಹಿಡುವಳಿದಾರ್ರಿಗೆ ಅಧಿಕಾರ ವಿರುವದಿಲ್ಲ

ಬತಾರೀಖು 11ನೇ ಮಾರ್ಚಿ 1890ನೇ ಇಸವಿ.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ,

1. ಮೈಸೂರು ಡಿಸ್ಟ್ರಿಕ್ಟು ಮಂಡ್ಯೆ ತಾಲ್ಲೂಕು ಗ್ರಾಮಾಂತರಗಳ ಸರ್ಕಾರ ಬಂಜರ್ ಜಮೀನುಗಳಲ್ಲಿ ಯಿರುವ ಕುರಂಗದ ಕಲ್ಲುಗಳನ್ನು ಜಮಾಯಿಸಿಕೊಳ್ಳುವ ಬಗ್ಗೆ ಗುತ್ತಿಗೆಯನ್ನು 1890ನೇ ಇಸವಿ ಏಪ್ರೆಲ್ ಮಾಹೆ 15ನೇ ಮರ್ತ್ಯಂನಲ್ಲಿ ಮಂಡ್ಯೆ ತಾಲ್ಲೂಕು ಕಚ್ಚೇರಿಯಲ್ಲಿ ಅಮಲ್ದಾರ್ರ ರೂಬರೂ ಪೋಟಾಪೋಟಿಯಿಂದ ಹರಾಜು ಮಾಡಿಸುತ್ತಾರೆ. ಯಿಚ್ಛೈವುಳ್ಳ ಜನರು ಹಾಜರಾಗಿ ಚಡ ದರಖಾ ಸ್ತು ಮೂಲಕ ಪಡೆಯಬಹುದು.

2. ಈ ಕಂಟ್ರಾಕ್ಟುವಾಯಿದೆಯು 1891ನೇ ಇಸವಿ ಮಾರ್ಚಿ ಮಾಹೆ ಆಖೈರಿಗೆ ಪೂರ್ತಿಯಾಗಿರುವದು.

3. ಚಡಸವಾಲ್ದಾರನು ತನ್ನ ಬೀಟು ಮೊಬಲಗು ವೈಕಿ ನಾಲ್ಕರಲ್ಲಿ ಬಂದು ಭಾಗ ಮೊಬಲಗನ್ನ ಶೇವಣಿಯಾಗಿ ತಕ್ಷಣವೆ ಹಾಜರ್ಮಾಡಬೇಕು. ಉಳಿದ ಮೊಬಲಗನ್ನು ಹರಾಜು ಜೇಟು ಲಾಗಾಯಿತು ಹದಿನೈದು ದಿವಸದ ಒಳಗಾಗಿ ಪಾವತಿ ಮಾಡಬೇಕು. ಇದ ಕ್ಕೆ ತಪ್ಪಿದರೆ ಹಾಜರ್ಮಾಡಿದ ಶೇವಣಿ ಮೊಬಲಗು ಸರ್ಕಾರಕ್ಕೆ ದಂಡವಾಗಿ ಕೇರಿಸಿಕೊಳ್ಳಲ್ಪಡುವದು. ಡಿಪಾಜಿಟ್ ಹಾಜರ್ಮಾಡದೆ ಯಿದ್ದಾ ಗ್ಯೂ ಅಥವಾ ಬಾ॥ ಮೊಬಲಗು ಪಾವತೀಮಾಡಲು ತಪ್ಪಿದಾಗ್ಯೂ ಈ ಬಾಬು ಪುನಹಾ ಹರಾಜು ಮಾಡಲ್ಪಟ್ಟು ಆದರಿಂದ ಉಂಟಾಗುವ ನಷ್ಟಕ್ಕೆ ಮೊದಲ್ ಚಡ ಸವಾಲ್ದಾರನು; ಗುರಿಯಾಗುವನು ಚಡ ಸವಾಲ್ ಮೊಬಲಗಿನ ಮೇಲೆ ರೂಪಾಯಿ 1ಕ್ಕೆ ಒಂದು ಆಣೆಮೇರಿಗೆ ಲೋಕಲ್ ಸೆಸ್ಸು ಸಹ ಚಡ ಸವಾಲ್ದಾರನು ಕೊಡಬೇಕು.

4. ಈ ಹರಾಜು ದಿವಾಣಸಾಹೆಬರವರ ಮುಂಜೂರಾತಿಗೆ ಒಳಪಟ್ಟಿರುತ್ತೆ, ಮುಂಜೂರು ಹುಕ್ಕುಂ ಬಂದ ಕೂಡ್ಲೆ ಬಾಬು ಸುಫ ದ್ದು ಮಾಡಲ್ಪಡುತ್ತೆ.

5. ಯಿಜಾರೆದಾರನು ಸರ್ಕಾರದ ಬಂಜರು ಜಮೀನುಗಳಲ್ಲಿರುವ ಹುಲ್ಲನ್ನು, ಹುಲ್ಲು ಇಜಾರೆ ಮಾಡಿಕೊಂಡವರು ಮೇಯಿಸಿ ಕೊಳ್ಳುವದಕ್ಕೆ ಅಭ್ಯಂಕರ ಪಡಿಸಕೂಡದು.

6. ಸರ್ಕಾರದ ಬಂಜರು ಜಮೀನುಗಳನ್ನು ನಗದೀಯಾತಿಗೆ ದರಖಾಸ್ತು ಬಂದದ್ದರ ಮೇಲೆ ಸರ್ಕಾರದವರು ಸಾಗುವಳಿಗೆ ಕೊಡ ತಕ್ಕ ವಿಷಯದಲ್ಲಿ ಯಿಜಾರೇದಾರನು ಅಡ್ಡಿಮಾಡಕೂಡದು.

7. ಈ ಕಲ್ಲುಗಳನ್ನು ಜಮಾಯಿಸುವದಕ್ಕೋಸ್ಕರ ಜಮೀನುಗಳಲ್ಲಿ ಗುಂಡಿಗಳ ಮಾಡಿ ಅರೂಪ ಪಡಿಸಕೂಡದು, ಹಾಗೆ ಮಾಡಿದ್ದಾದರೆ ಅಂಥಾ ಗುಂಡಿಗಳನ್ನು ತಕ್ಷಣವೆ ಯಿಜಾರೆದಾರನು ಹಾತ'ಲಾಗವಡಿನಿಂದ ಮುಚ್ಚಿ ಪೂರ್ವದ ಸ್ಥಿತಿಗೆ ತರುವದಕ್ಕೆ ಬದ್ಧ ನಾಗಿರಬೇಕು.

8. ಯಿಜಾರೆದಾರನು ಹಿಡು[illegible] ಕುರಂಗದ ಕಲ್ಲುಗಳನ್ನು, ಆಯಾಯು ಹಿಡುವೇದಾರ್ರ ಅನುಮತಿ ವಿನಹ ಆರಿಸಿಕೊಳ್ಳಕೂಡದು. [illegible] ಕಲ್ಲುಗಳನ್ನು ಜಮಾಯಿಸಿಕೊಳ್ಳುವದಕ್ಕಾಗಲಿ ಅಥವಾ ಯಿಜಾ ರೆದಾರ್ರ ವಿನಹ ಇತರರಿಗೆ [illegible] ಕಾರ ವಿರುವದಿಲ್ಲ.

ಬತಾರೀಖು 1[illegible]

ಬಿ. ತಿರುಮಲಚಾರಿ,
ಫಾರ್ ಡೆಪ್ಯೂಟಿ ಕಮಿಷನರ್.

ಹಾಸನ ಡಿಸ್ಟ್ರಿಕ್ಟು.

ಸ॥ 1890ನೇ ಇಸವಿ 10ನೇ ಮಾರ್ಚಿ, ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ,—

ಹಾಸನ ಡಿಸ್ಟ್ರಿಕ್ಟು ಹೊಳೆನರಸೀಪುರದ ತಾಲ್ಲೂಕಿನಲ್ಲಿ ಕುರಂಗದ ಕಲ್ಲುಗಳನ್ನ ಜಮಾಯಿಸಿಕೊಳ್ಳತಕ್ಕ ಹಕ್ಕುದಾರಿಯು ಹೊ ನರಸೀಪುರದ ತಾಲ್ಲೂಕು ಕಚೇರಿಯಲ್ಲಿ ಸ॥ 1890ನೇ ಇಸವಿ ಏಪ್ರೆಲ್ ತಾರೀಖು 14ನ್ನು ದಿವಿ 11 ಘಂಟೆಗೆ ಪ್ರಾರಂಭಿಸಿ ಗಿ ಹರಾಜು ಮಾಡಲ್ಪಡುವದು.

2. ಅಮಲ್ದಾರು ಅಥವಾ ಶಿರಸ್ತೇದಾರು ಹರಾಜು ಮಾಡಿಸಲ್ಪಡುವರು.

3. ಈ ಹರಾಜಿನ ಚಡ ದರಖಾಸ್ತು ಹಾಸನ ಡಿಸ್ಟ್ರಿಕ್ಟ್ ಡೆಪ್ಯುಟಿ ಕಮ್ಮಿಷನರವರಿಂದ ಮಂಜೂರ ಮಾಡುವ ಪರಿಯಂತ ಬೆ ಯಂ ಅದ್ದಾಗಿ ತೆಗೆದುಕೊಳ್ಳ ಕೂಡದು.

4. ಇಜಾರೆಯು ಸ್ ೧೮೯೧ನೇ ಇಸವಿ ಮಾರ್ಚಿ 31ರ ವರಿಗೆ ಜಾರಿಯಲ್ಲಿ ಯಿರತಕ್ಕದ್ದು.

5. ಕ್ರಯದಾರನು ಹರಾಜು ಕಾಲದಲ್ಲಿ ಕ್ರಯದ ಮೊಬಲಗು ಪೈಕಿ ಶೇಕಡಾ 25 ರೂಪಾಯಿನಂತೆ ಆಗುವ ಮೊಬಲಗನ್ನು ಡಿಪಾ ಜಿಟ್ ಯಿಡಬೇಕಲ್ಲದೆ ಹರಾಜು ಮಾಡಲ್ಪಟ್ಟ ಸಂಗತಿ ಡೆಪ್ಯುಟಿ ಕಮ್ಮಿಷನರವರಿಂದ ಕ್ರಯದಾರನಿಗೆ ತಿಳಿಸಲ್ಪಟ್ಟು ತಾರೀಖು ಮೊದಲು 7 ದಿನದ ಒಳಗಾಗಿ ಕ್ರಯದ ಪಟ್ಟೀ ಮೊಬಲಗಿನ ಮೇಲೆ ರೂಪಾಯಿ ಬಂದಕ್ಕೆ ಒಂದಾಣೆಯಂತೆ ಆಗುವ ಲೋಕಲ್‌ಸೆಸ್ಸು ದೇಖೀಲ್ ಬಾ ಕಿ ಕ್ರಯದ ಮೊಬಲಗನ್ನು ಪಾವತಿ ಮಾಡದಿದ್ದರೆ ಹಾಗೆ ಡಿಪಾಜಿಟ್ ಇಟ್ಟ ಮೊಬಲಗನ್ನು ಸರಕಾರಕ್ಕೆ ದಂಡವಾಗಿ ತೆಗದುಕೊಳ್ಳಲ್ಪಡುವದು. ಹಾಗೆ ಡಿಪಾಜಿಟ್ ಮೊಬಲಗು ಹಾಜರ್ಮಾಡದಿದ್ದರೂ ಅಥವಾ ಬಾಕಿ ಕ್ರಯದ ಮೊಬಲಗು ಪಾವತಿ ಮಾಡದಿದ್ದರೂ ಹಕ್ಕುದಾರಿಯ ಅವ್ವಲ್ ಕ್ರಯದಾರನ ಖರ್ಚಿಗೂ ಮತ್ತು ಲುಕ್‌ಸಾನಿಗೂ ವಳಪಟ್ಟು ಪುನಹ ವಿಕ್ರಯಿಸಲ್ಪಡುವದು.

6. ಹರಾಜು ಷರತ್ತುಗಳು.

ಎ. ಹಿಡುವಳಿ ಜಮಿನಿನಲ್ಲಿ ಯಿರತಕ್ಕ ಕಲ್ಲುಗಳನ್ನು ತೆಗದುಕೊಳ್ಳಬೇಕಾದರೆ ಹಿಡುವಳಿದಾರನ ಸಂಮತಿಯನ್ನು ಪಡಿಯ ಬೇಕು, ಜಮಿನು ಹಿಡುವಳಿದಾರನು ತನ್ನ ಕಲ್ಲುಗಳನ್ನು ಸ್ವಂತ ಪ್ರಯೋಜನಕ್ಕಾಗಿ ತೆಗದುಕೊಳ್ಳಲೂ ಕೂಡದು. ಇ ಜಾರೆದಾರನಿಗೆ ಮಾರಬೇಕೇ ಹೊರ್ತು ಇತರ ಜನರಿಗೆ ಮಾರಲೂ ಕೂಡದು.

ಬಿ. ಇಜಾರೆದಾನು ಹುಲ್ಲುಬನ್ನಿ ಇಜಾರೆದಾರರ ಚರಾವು ಹಕ್ಕಿನಲ್ಲಿ ಪ್ರವೇಶಿಸಕೂಡದು.

ಸಿ. ಲಂಜರ್ ಜಮಿನುಗಳ ಸಾಗುವಳಿ ಬಗ್ಯೆ ದರಖಾಸ್ತು ಬಂದಲ್ಲಿ ಆ ಪ್ರಕಾರ ಸಾಗುವಳಿಗೆ ಕೊಟ್ಟು ಬಿಡುವದಕ್ಕೆ ಕುರಂ ಗದ ಇಜಾರೆದಾರನು ಅಡ್ಡಿ ಹೇಳಕೂಡದು, ಅಂಥಾ ಜಮಿನುಗಳಲ್ಲಿ ಕುರಂಗದ ಕಲ್ಲುಗಳನ್ನ ತೆಗದುಕೊಳ್ಳತಕ್ಕ ಹಕ್ಕುದಾರಿ ಮಾತ್ರ ಇಜಾರೆದಾರನಿಗೆ ವುಳದಿರುತ್ತೆ.

ಡಿ. ಇಜಾರೆದಾರನು ಕಲ್ಲುಗುಂಗೋಸ್ತರ ಜಮಿನುಗಳನ್ನು ಅಗಿಯಕೂಡದು, ಬಂದು ವೇಳೆ ಹಾಂಗೆ ಅಗದಲ್ಲಿ ಆ ಗುಂಡಿಗ ಳನ್ನ ತಕ್ಷಣ ಮುಚ್ಚಿಬಿಟ್ಟು ಸಾಗುವಳಿಗೆ ಜಮೀನ್ ಲಾಯಕ್ ಯಿರುವ ಹಾಗೆ ಮಾಡಬೇಕು.

ಬಿ. ಆರ್. ಪೂರ್ಣಯ್ಯ,
ಡೆಪ್ಯುಟಿ ಕಮ್ಮಿಷನರ್.

ಗವರ್ಮೆಂಟ್ ತಯಾರೀ ಬಾಲಂತು ಸಿಂಕೋನಾ ಫೆಬ್ರಿಫ್ಯೂಜ್ ಎಂಬ ಔಷಧ.

ಈ ಔಷಧವು, ಕ್ವಿನೈನ್‌ಗೆ ಬದಲಾಗಿ ಉಪಯೋಗಿಸತಕ್ಕ ಬಹಳ ಯೋಗ್ಯವಾದ ಔಷಧವಾಗಿರುತ್ತೆ. ಜನಗಳಿಗಾಗಿ ಧರ್ಮಾರ್ಥ ವಾಗಿ ಗವರ್ಮೆಂಟ್ ಆಫಿಸರ್‌ಗಳು ಕೊಂಡು ಕೊಳ್ಳಬಹುದು, ಬಂದು ಸಲಕ್ಕೆ ಇಪ್ಪತ್ತು ಪೌಂಡ್‌ಗಳು ತಗದುಕೊಳ್ಳುವಯಾವ ಮನುಷ್ಯ ನಾದರೂ ಕಲ್ಕತ್ತೆಯಲ್ಲಿ ಬೊಟಾನಿಕಲ್ ಗಾರ್ಡನ್ ಸೂಪರಿಂಟೆಂಡೆಂಟರ ದೆಕೆಯಿಂದ ಇದರಡಿ ಕಂಡ ದರಗಳ ಪ್ರಕಾರ ನಗದು ಕೊಟ್ಟೇ ಕೊಂಡುಕೊಳ್ಳಬೇಕಾಗಿರುತ್ತೆ. ನಾಲ್ಕು ಔನ್ಸ್ ಔಷಧವುಳ್ಳ ತಗರದ ಡಬ್ಬೀ ಬಂದಕ್ಕೆ ರೂ. 3—14—0; ಎಂಟು ಔನ್ಸ್‌ವುಳ್ಳ ಡಬ್ಬಿಗೆ ರೂ. 7—4—0; ಬಂದು ಪೌಂಡ್ ಔಷಧವುಳ್ಳ ಡಬ್ಬಿಗೆ ರೂ. 14—0—0; ಬೊಟಾನಿಕಲ್ ಗಾರ್ಡನ್ ಸೂಪರಿಂಟೆಂಡೆಂಟರು ಇದರಡಿ ಕಂಡ ದರ ಪ್ರಕಾರ ನಗದಿಗೇನೇ ಸರ್ವಜನಗಳಿಗೂ ಬದಗಿಸಬಹುದು. ಇಕ್ಕೆ ರೂ. 4—14—0; ಎಂಟು ಔನ್ಸ್‌ವುಳ್ಳ ಡಬ್ಬಿಗೆ ರೂ. 9—4—0; ಬಂದು ಪೌಂಡ್‌ವುಳ್ಳ ಡಬ್ಬಿಗೆ ಕತ್ತೆಯಲಿ ಮುಖ್ಯ ಮುಖ್ಯ ಯೂರೋಪಿಯರ್ ವ ನೇಟೀವ್ ಮುದ್ದಿನಂಗಡಿಯವರಿಂದ ಔನ್ಸ್ ತಗರದ ಡಬ್ಬಿಗೆ 4 ಆಣೆಯೂ, 8 ಔನ್ಸ್ ತಗರದ ಡಬ್ಬಿಗೆ 8 ಆಣೆ ಲೂ ಕೊಡಬೇಕು.

Mysore Govt. Central Press, Bangalore.—1890.